ಸರಳಾಬಾಯಿ ಮರೆತರೂ ಪ್ರೇಮಚಂದನ ನೆನಪಿನಾಳದಲ್ಲಿ ಅದಿನ್ನೂ ಮರೆಯಲಾಗದ ಕಹಿ ಅನುಭವವಾಗಿ ಉಳಿದುಕೊಂಡಿದೆ. ಮದುವೆಯಾದ ಆರಂಭದ ಆ ದಿನಗಳಲ್ಲಿ ಗಂಡ ಹೆಂಡತಿ ಇಬ್ಬರೇ ಇದ್ದಾಗ ಸರಳಾಬಾಯಿ ಸುಮ್ಮನೆ ಮಾತಿಗೆ ಅಂತಲೋ ಇಲ್ಲವೆ ಛೇಡಿಸಬೇಕೆಂದೋ ಪ್ರೇಮಚಂದನ ಹೆಸರಿನ ಮೂಲಕ್ಕೆ ಕೈಹಾಕಿದ್ದಳು. 'ಅಲ್ರೀ ಲಗ್ನ ಪತ್ರದಾಗ ಏನು ಹಾಕ್ಬೇಕು ಅಂತ ನಮ್ಮ ಅಪ್ಪ ಕೇಳಿದರ ನಿಮ್ಮ ಅಪ್ಪ ವ್ಹಿ.ಎಸ್. ಗಲಗಲಿ ಅವರ ಜೇಷ್ಠಪುತ್ರ ಚಿ. ಪ್ರೇಮಚಂದ ಅಂತ ಹಾಕ್ರಿ ಅಂದರಂತ. ನಮ್ಮ ಅಪ್ಪ ಕೂಡ ಹಿಂದ ಮುಂದ ವಿಚಾರ ಮಾಡ್ದ ಹಂಗೇ ಪ್ರಿಂಟ್ ಹಾಕಿಸಿಬಿಟ್ರು. ಈ ದೇಶಮುಖಿಗ ತಲಿ ಕೆಟ್ಟಾದೇನು ಮಗಳ್ನ ಯಾರ್ದೋ ಪೈಕಿ ಹುಡಗನಿಗಿ ಲಗ್ನಾ ಮಾಡಿ ಕೊಡ್ಲಿಕತ್ತಾನ ಅಂತ ಊರ ಮಂದಿ ಬೈದಕೊಂಡರಂತ. ಯಾಕ ವೆಂಕೋಬರಾವ ಶ್ರೀಹರಿರಾವ ಗಲಗಲಿ ಅವರ ಜೇಷ್ಠಪುತ್ರ ಚಿ. ಪ್ರೇಮಚಂದ ಅಂತ ಹಾಕಿಸಿದ್ರ ಒಂದಿಷ್ಟು ಮಾನನಾದರೂ ಉಳಿತಿತ್ತು. ನಿಮ್ಮ ಹೆಸರು ಕೇಳಿದ ಮ್ಯಾಲ ನಮ್ಮ ಅಜ್ಜಿ ಹಿಂಗ ಬ್ಯಾರೆ ಜ್ಯಾತಿಪೈಕಿ ಹುಡುಗಗ ಪೋರಿ ಕೊಟ್ರ ನಾ ಭಾವಿಗಿ ಹಾರಿ ಸಾಯ್ತಿನಿ ಅಂತ ಸಾಯ್ಲಿಕ್ಕಿ ಹೋಗಿದ್ಲು. ಅವಳಿಗಿ ತಿಳಿಸಿ ಹೇಳೊದ್ರೊಳ್ಗ ನಮ್ಮ ಅಪ್ಪನ ಬುದ್ಧಿಯೆಲ್ಲಾ ಖರ್ಚಾಯ್ತು.' ಸರಳಾಬಾಯಿ ಚೇಷ್ಟೆಗೆಂದು ಅಂದು ಆಡಿದ ಮಾತು ಪ್ರೇಮಚಂದನ ಮನಸ್ಸಿನಲ್ಲಿ ಬಹಳ ದಿನಗಳ ಕಾಲ ನೆಲೆಯೂರಿ ಕುಳಿತಿತ್ತು. ಹಿಂದೀ ಸಾಹಿತ್ಯ ಪ್ರೇಮಿಯಾಗಿದ್ದ ಅಪ್ಪ ಹಿಂದೀ ಸಾಹಿತ್ಯದ ಮೇರು ಬರಹಗಾರ ಪ್ರೇಮಚಂದರ ಹೆಸರನ್ನು ಮಗನಿಗಿಟ್ಟು ಅಭಿಮಾನ ಮೆರೆದಿದ್ದರು. ಮನೆಯ ಕಪಾಟುಗಳಲ್ಲಿ ಪ್ರೇಮಚಂದರ ಎಲ್ಲ ಕೃತಿಗಳನ್ನು ಒಪ್ಪಓರಣವಾಗಿ ಜೋಡಿಸಿಟ್ಟಿರುತ್ತಿದ್ದ ಚಿತ್ರ ಇವತ್ತಿಗೂ ಕಣ್ಮುಂದೆ ಕಟ್ಟಿದಂತಿದೆ. ಅದೇಕೋ ಏನೋ ತನ್ನ ಅಸ್ತಿತ್ವವನ್ನೇ ಮಸುಕಾಗಿಸಿದ ಈ ಹೆಸರಿನ ಬದಲು ಅಪ್ಪನಿಗೆ ಬೇರೆ ಯಾವ ಹೆಸರೂ ಮನಸ್ಸಿಗೆ ಹೊಳೆಯಲಿಲ್ಲವೆ ಎಂದು ಅಪ್ಪನ ಮೇಲೆ ಕೋಪ ಮತ್ತು ತನ್ನ ಹೆಸರಿನ ಬಗ್ಗೆ ಜಿಗುಪ್ಸೆ ಮೊದಲ ಬಾರಿಗೆ ಪ್ರೇಮಚಂದನ ಮನಸ್ಸಿನಲ್ಲಿ ಮೂಡಿತು.

ಈಗೀಗ ಪ್ರೇಮಚಂದನಿಗೆ ಮನೆಯ ಮಲಗುವ ಕೋಣೆಯಲ್ಲಿದ್ದ ಅಲ್ಮೆರಾಗೆ ಹಚ್ಚಿದ್ದ ಆಳೆತ್ತರದ ನಿಲುವುಗನ್ನಡಿಯಲ್ಲಿ ದಿನಕ್ಕೆ ನೂರಾರು ಬಾರಿ ತನ್ನ ಮುಖವನ್ನು ವಿವಿಧ ಭಾವ ಭಂಗಿಗಳಲ್ಲಿ ಸೃಷ್ಟಿಸಿಕೊಳ್ಳುತ್ತ ನೋಡುತ್ತ ನಿಲ್ಲುವುದು ವಾಸಿಯಾಗದ ಕಾಯಿಲೆಯಂತೆ ಅಂಟಿಕೊಂಡು ಬಿಟ್ಟಿದೆ. ಹೀಗೆ ನಿಲುವುಗನ್ನಡಿಯ ಎದುರು ನಿಂತ ಒಂದು ಅಪೂರ್ವ ಗಳಿಗೆ ಬುದ್ಧಿಜೀವಿಗಳಂತೆ ಗಡ್ಡಬಿಟ್ಟರೆ ತನ್ನ ಚಹರೆ ಇತರರನ್ನು ಬಲುಬೇಗ ಆಕರ್ಷಿಸಬಹುದೇನೋ ಎನ್ನುವ ವಿಚಾರ ಹೊಳೆದದ್ದೆ ಅದನ್ನು ಮುಂದಿನ ಕೆಲವೇ ದಿನಗಳಲ್ಲಿ ಕಾರ್ಯರೂಪಕ್ಕೆ ತಂದ. ಮನೆಯಲ್ಲಿ ಹೆಂಡತಿ ಈ ಕುರಿತು ಕೆಲವು ದಿನ ಆಡಿಕೊಂಡಳಾದರೂ ಇದು ವಾಸಿಯಾಗದ ಕಾಯಿಲೆಯೆಂದೂ ಇದಕ್ಕೆಲ್ಲ ತನ್ನ ದಿವ್ಯ ನಿರ್ಲಕ್ಷ್ಯವೇ ಮದ್ದದೆಂದು ಸುಮ್ಮನಾಗಿಬಿಟ್ಟಳು. ಆಫೀಸಿನಲ್ಲಿ ಮತ್ತು ಪರಿಚಿತರಲ್ಲಿ ಕೆಲವು ದಿನ ಉತ್ತೇಜನಾತ್ಮಕ ಪ್ರತಿಕ್ರಿಯೆ ದೊರೆತರೂ ಬರಬರುತ್ತ ಪ್ರೇಮಚಂದನಿಗೆ ವಿಚಿತ್ರವಾದ ಕಾಯಿಲೆ ಅಂಟಿಕೊಂಡಿದೆಯೆಂದೂ ಅವನ ಗಲ್ಲಗಳು ಊದಿಕೊಂಡು ಅಸಹ್ಯವಾಗಿ ಕಾಣುತ್ತಿವೆಯೆಂದೂ ಅದನ್ನು ಮರೆಮಾಚಲೆಂದೇ ಅವನು ಗಡ್ಡಬೆಳೆಸಿದ್ದಾನೆಂಬ ಗುಮಾನಿಯ ಮಾತುಗಳು ಎಲ್ಲ ಕಡೆ ಹರಿದಾಡತೊಡಗಿ ಅವು ಪ್ರೇಮಚಂದನ ಕಿವಿಗಳಿಗೂ ತಲುಪಲು ಹೆಚ್ಚಿನ ವೇಳೆ ಹಿಡಿಯಲಿಲ್ಲ. ಈ ಗುಮಾನಿಯ ಮಾತುಗಳಿಂದ ಪ್ರೇಮಚಂದ ಸ್ವತಃ ಎಷ್ಟು ದಿಗಿಲುಗೊಂಡನೆಂದರೆ ಆ ದಿನ ಆಫೀಸಿನಿಂದ ನೇರವಾಗಿ ಮನೆಗೆ ಹೋಗದೆ ದಾರಿಮಧ್ಯದಲ್ಲಿ ಸಿಗುವ ಸಲೂನ್ ಅಂಗಡಿಯನ್ನು ಹೊಕ್ಕು ಕ್ಷೌರಿಕನಿಗೆ ಮುಖಕೊಟ್ಟು ಕುಳಿತ. ಗಡ್ಡ ಧರೆಗಿಳಿದು ನುಣುಪಾದ ತನ್ನ ಹೊಳೆಯುವ ಮುಖ ಸಲೂನ್ ಅಂಗಡಿಯಲ್ಲಿದ್ದ ಎದುರಿನ ಕನ್ನಡಿಯಲ್ಲಿ ಕಂಡಾಗಲೆ ಅವನಿಗೆ ಸಮಾಧಾನವಾಯಿತು. ಗಂಡನ ಇತ್ತೀಚಿನ ವಿಚಿತ್ರ ವರ್ತನೆಗಳನ್ನೆಲ್ಲ ನೋಡಿ ಬೇಸತ್ತಿದ್ದ ಸರಳಾಬಾಯಿ ಅವತ್ತು ರಾತ್ರಿ